# ಒಲವು ತುಂಬಿದ ಹುಡುಗಿ

ಅಗೊ, ಅದು ನನ್ನದೆ ಕಿಟಕಿ.
ನಿದ್ದೆತಿಳಿದು ಎದ್ದೆ ನಾನು, ಈಗಲೆ ಈ ಗಳಿಗೆ,
ಅಲ್ಲ ಎಚ್ಚರವು ಅಲ್ಲ ನಿದ್ದೆಯು, ನಸುಕುಮಸುಕು ಲೋಕ.
ಎಲ್ಲಿದೆ ನನ್ನಯ ಬದುಕಿನ ಎಲ್ಲೆ,
ಇರುಳು ಹೊರಳುವುದು ಯಾವಾಗ?

ಕ್ಷಣದ ಹಿಂದೆ:
ನನ್ನ ಸುತ್ತ ತುಂಬಿದಂಥ ವಸ್ತುಲೋಕವೆಲ್ಲ
ನಾನೆ ಆಗಿ ಕಾಣುವಂಥ ಮರುಳು ನನ್ನ ತುಂಬ.
ಬೆಳಕುಕಿರಣ ತಲುಪದಿರುವ ಹರಳುಕಲ್ಲಿನಂತೆ
ಅತಿಗಹನವಾಗಿ, ನಸುಮೂಕವಾಗಿ,
ನನ್ನಲ್ಲೆ ಮುಳುಗಿ ನಿಂತೆ.

ಚಿಕ್ಕೆಬಳಗಕ್ಕೆ ಕೂಡ, ಎದೆಯೊಳಗಡೆ ಎಡೆಯಿದೆ,
ಜಗದಗಲ ತಾನೆಂದು ಹೃದಯ ಹೇಳುತ್ತಿದೆ,
ಅವನ, ಅವನನ್ನು ಕೂಡ ಹೊರಗೆ ಕಳಿಸುತ್ತದೆ,
ಅವನೆ ಅವನೆ ಇನಿಯನೆಂದು ಮನವು ಪಿಸುಗುಟ್ಟಿದೆ,

ಒಲವು ಮೊದಲಾಯಿತೆ, ನನಗೇನು ಗೊತ್ತಿದೆ
ಎದೆಬಯಲು ತುಂಬಿತೆ, ಖಾಲಿತನ ಕಳೆಯಿತೆ,
ಕನಸ ನೆನಪು ಉಳಿಯದಂತೆ, ಏನಾಯಿತು ನನ್ನ ಕಥೆ
ಸುಳಿವು ಕೊಡದ, ಅತಿನಿಗೂಢ, ನಾಳೆ ಮುಂದೆ ನಿಂತಿದೆ.

ಹುಲ್ಲುಬಯಲಿನ ಹಾಗೆ ಮೈಯೆಲ್ಲ ಗಮ್ಮನೆ
ಹಾಗೆ ಹೀಗೆ ಚಲಿಸುವಾಟ, ಬೀಸೆ ಗಾಳಿ ಸುಮ್ಮನೆ.
ಈ ಅನಂತದ ಕೆಳಗೆ ನನ್ನಿರವು ಹರಡಿದೆ
ಇದು ಏಕೆ ಹೀಗಿದೆ, ನನಗೆ ಏನಾಗಿದೆ?

ಆರ್ತಳಾಗಿ ಕರೆಯುತೇನೆ, ಎದೆಯು ಬಡಿವ ಮದ್ದಲೆ
ಯಾರೊ ಕೇಳಲೇನು ಗತಿ, ಮನಸು ತರಗೆಲೆ.
ಯಾವುದೊ ಇನ್ನೊಂದರೊಳಗೆ ಕರಗಿ ಕಾಣೆಯಾಗಲೆ,
ಆಯ್ಕೆಯಿದೆಯೆ, ಏಕೆ ಬೇಕು? ನಾ ನಿನ್ನಲಿ ಬತ್ತಲೆ.



Girl in Love, Book of Images (1902-06)